1.3.2

UNIVERSITY OF MYSORE

## Department of Studies in Social Work

Manasagangotri, Mysuru

## Social Work Students Forum - 2022-23

**One week** Training Programme on

# "An Experience based Training Programme on the Functions of HRM"

**from 05-05-2022 to 11-05-2022**

| | | |
|---|---|---|
| **Inauguration and Inaugural address** | : | **Sri. Nagaraja R.**<br>Deputy General Manager<br>BEML, Mysuru Complex, Mysuru. |
| **Presided by** | : | **Dr. Jyothi H.P.**<br>Chairperson<br>Department of Studies in Social Work<br>University of Mysore<br>Manasagangotri, Mysuru. |
| **Presence** | : | **Dr. Chandramouli**<br>Associate Professor<br>Department of Studies in Social Work<br>University of Mysore<br>Manasangangotri, Mysuru. |
| **Resource Persons** | : | **Sri Adarsha & Team**<br>HR Zone, Bengaluru. |

**Date** : 05/05/2022
**Time** : 10.30 am

**Place** : Seminar Hall, Department of Studies in Social Work Manasagangotri, Mysuru

**All are Cordially Invited**

By the

**Chairperson, Faculty Members, Staff, Research Scholars and Students**

Department of Studies in Social Work

University of Mysore, Manasagangotri, Mysuru

# "An Experience Based Training Programme on the funcation of HRM" ತರಬೇತಿ ಕಾರ್ಯಗಾರದ ವರದಿ

ದಿನಾಂಕ **05-05-2022** ರಿಂದ ದಿನಾಂಕ **11-05-2022** ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ಅಧ್ಯಯನ ವಿಭಾಗದಿಂದ **"An Experience Based Training Programme on the funcation of HRM"** ಎಂಬ ವಿಷಯದ ಮೇಲೆ ತರಬೇತಿ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು. ಇದರ ಸಮಾರೋಪ ಸಮಾರಂಭವು ದಿನಾಂಕ **11-05-2022** ರಂದು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ಅಧ್ಯಯನ ವಿಭಾಗದ ಸೆಮಿನಾರ್ ಹಾಲ್‌ನಲ್ಲಿ ನಡೆಯಿತು. ಸಮಾರಂಭಕ್ಕೆ ತುಮಕೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. (ಕರ್ನಲ್) ವೈ.ಎಸ್. ಸಿದ್ದೇಗೌಡರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮುಖ್ಯ ಅತಿಥಿಗಳು ಸಮಾಜಕಾರ್ಯ ಮತ್ತು ಮಾನವ ಸಂಪನ್ಮೂಲ ನಿರ್ವಹಣೆಗೆ ಪ್ರಾಯೋಗಿಕ ತರಬೇತಿ ಎಷ್ಟು ಮುಖ್ಯ ಎಂದು ವಿವರಿಸಿದರು. ಪ್ರಸಕ್ತ ಸಮಯದಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣ ಮತ್ತು ವಿವಿಧ ಪದವಿಗಳು ಎಷ್ಟು ಸಮಂಜಸ ಎಂದು ವಿವರಿಸಿದರು. ಶಿಕ್ಷಣದ ಗುಣಮಟ್ಟ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಅದರ ಪಾತ್ರ ಎಂಬುದರ ಬಗ್ಗೆಯೂ ಹೆಚ್ಚು ಒತ್ತು ನೀಡಿ ಮಾತನಾಡಿದರು. ಈ ಆರು ದಿನದ ಕಾರ್ಯಕ್ರಮಕ್ಕೆ ಶ್ರೀ. ಆದರ್ಶ, ಹೆಚ್. ಆರ್. ಝೋನ್, ಬೆಂಗಳೂರು, ಇವರು ಸಂಪನ್ಮೂಲ ವ್ಯಕ್ತಿಯಾಗಿದ್ದರು. ಈ ಕಾರ್ಯಕ್ರಮದಲ್ಲಿ ಆದರ್ಶರವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಡಾ. ಹೆಚ್.ಪಿ. ಜ್ಯೋತಿರವರು, ಅಧ್ಯಕ್ಷರು, ಸಮಾಜಕಾರ್ಯ ಅಧ್ಯಯನ ವಿಭಾಗ ಇವರು ಈ ಕ್ಷೇತ್ರದಲ್ಲಿ ಶಿಸ್ತು ಎಷ್ಟು ಮುಖ್ಯ ಎಂದು ವಿವರಿಸಿದರು. ಕ್ಷೇತ್ರ ಕಾರ್ಯ ಸಮಾಜ ಕಾರ್ಯ ಶಿಕ್ಷಣದ ಬಹುಮುಖ್ಯ ಅಂಗ ಎಂದು ವಿವರಿಸಿದರು. ಕ್ಷೇತ್ರ ಕಾರ್ಯವು ವೃತ್ತಿಪರ ಬದುಕಿನ ಗುಣಮಟ್ಟವನ್ನು ಹೆಚ್ಚಿಸುತ್ತದೆ ಎಂದು ಹೇಳಿದರು.

ಕ್ಷೇತ್ರ ಕಾರ್ಯವು ವಿದ್ಯಾರ್ಥಿಗಳಿಗೆ ಸಮಾಜಕಾರ್ಯ ಕ್ಷೇತ್ರದ ಬಗ್ಗೆ ಸಮಗ್ರ ಜ್ಞಾನವನ್ನು ನೀಡಿ ಅವರನ್ನು ಭವಿಷ್ಯದ ಸಮಾಜ ಕಾರ್ಯಕರ್ತರನ್ನಾಗಿ ನಿರ್ಮಿಸುತ್ತದೆ ಎಂದು ಹೇಳಿದರು. ಸಮಾಜ ಕಾರ್ಯವು ಸಿದ್ಧಾಂತ ಮತ್ತು ಪ್ರಯೋಗ ಎರಡರಿಂದ ರಚಿತವಾಗಿದೆ ಎಂದು ವಿವರಿಸಿದರು. ಸಮಾಜಕಾರ್ಯದ ಮೌಲ್ಯಗಳು, ತತ್ವಗಳು ಮತ್ತು ನೀತಿಗಳು ಇವು ಸಮಾಜಕಾರ್ಯದ ವೈಜ್ಞಾನಿಕ ಅಡಿಪಾಯಗಳು ಇವುಗಳನ್ನು ತರಗತಿಯಲ್ಲಿ ಕಲಿಯಬೇಕು ಎಂದು ಹೇಳಿದರು. ಉತ್ತಮ ಸಮಾಜ ಕಾರ್ಯಕರ್ತರಾಗಲು ನೈಜ ಜೀವನದಲ್ಲಿ ಸಮುದಾಯ ಪ್ರಯೋಗಾಲಯದಲ್ಲಿ ಕಲಿತ ವಿಷಯಗಳನ್ನು ಅಳವಡಿಸಿಕೊಳ್ಳಲು ಕರೆ ನೀಡಿದರು.


10/12/22
10:35 AM